**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 963/2019
ಪಿಡಬ್ಲು :18 ಸಿಡಬ್ಲು :27

ಸಾಕ್ಷಿಯ ಹೆಸರು : ಶ್ರೀ.ಮೊಹಮ್ಮದ ರಫಿಕ್ ತಹಶೀಲ್ದಾರ

ತಂದೆಯ ಹೆಸರು : ಶ್ರೀ.ಮಲಿಕಸಾಬ

ವಯಸ್ಸು : 42 ವರ್ಷ

ಉದ್ಯೋಗ : ಪೋಲಿಸ ಇನ್ಸಪೆಕ್ಟರ, ವಿದ್ಯಾಗಿರಿ ಪೋಲಿಸ ಠಾಣೆ, ಧಾರವಾಡ

ವಾಸ್ತವ್ಯ : ಧಾರವಾಡ

ದಿನಾಂಕ : 13-01-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

(**ಸಾಕ್ಷಿಯನ್ನು ವಿಡಿಯೋ ಕಾನ್ಫರೆನ್ಸ ಮುಖಾಂತರ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ಸಾಕ್ಷಿಯು ತಾವು ಕಾರ್ಯನಿರ್ವಹಿಸುತ್ತಿರುವ ವಿದ್ಯಾಗಿರಿ ಪೋಲಿಸ ಠಾಣೆ ಧಾರವಾಡ ಕಚೇರಿಯಿಂದ ತಮ್ಮ ಮೊಬೈಲ್ ಆಪ್ ನಿಂದ ನ್ಯಾಯಾಲಯದ ಗೂಗಲ್ ಮೀಟ್ ಆ್ಯಪ್ ಮೂಲಕ ವಿಚಾರಣೆಗೆ ಹಾಜರಾಗಿರುತ್ತಾರೆ. ಕೋಆರ್ಡಿನೇಟರ ಆಗಿ ಡಬ್ಲೂ.ಎ.ಎಸ್.ಐ ಶ್ರೀಮತಿ ಆರ್.ಕೆ. ರತ್ನಾಕರವರು ಹಾಜರಾಗಿರುತ್ತಾರೆ. ಸಾಕ್ಷಿಗೆ ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ ಕೇಳಿಸುತ್ತಿದೆಯೇ ಎಂದು ಸಾಕ್ಷಿಯಿಂದ ಖಾತರಿಪಡಿಸಿಕೊಂಡು ನ್ಯಾಯಾಲಯದ ಪ್ರಥಮ ದರ್ಜೆ ಸಹಾಯಕರಾದ ಶ್ರೀ.ಎಸ್.ಎಲ್.ದೇವರಮನಿ ರವರನ್ನು ಕೋಆರ್ಡಿನೇಟರ ಆಗಿ ನೇಮಿಸಿಕೊಂಡು ಆರೋಪಿ ಪರ ವಕೀಲರು ಹಾಗೂ ಸರ್ಕಾರಿ ವಕೀಲರ ಉಪಸ್ಥಿತಿಯಲ್ಲಿ ತೆರೆದ ನ್ಯಾಯಾಲಯದಲ್ಲಿ ವಿಚಾರಣೆಯನ್ನು ವಿಡಿಯೋ ಕಾನ್ಫರೆನ್ಸ ಮುಖಾಂತರ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು. ಸಾಕ್ಷಿಯು ತಮ್ಮ ಹತ್ತಿರ ಈ ಪ್ರಕರಣದ ಕಡತವು ಇರುವುದಾಗಿ ನುಡಿಯುತ್ತಾರೆ.**)

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಡಿಸೆಂಬರ 2016 ರಿಂದ ಜುಲೈ 2018 ರವರೆಗೆ ಹಾರೂಗೇರಿ ಪೋಲಿಸ ಠಾಣೆಯಲ್ಲಿ ಆರಕ್ಷಕ ಉಪನೀರಿಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 26-08-2017 ರಂದು ನಾನು ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ರಾತ್ರಿ 10:00 ಗಂಟೆಗೆ ಹಾರೂಗೇರಿ ಪೋಲಿಸ ಠಾಣೆ ವ್ಯಾಪ್ತಿಯ ನಾರಗೊಂಡ ಆಸ್ಪತ್ರೆಯಿಂದ ನನಗೆ ಎಮ್.ಎಲ್.ಸಿ ಬಂದಿತ್ತು, ಅದರಂತೆ ರಾತ್ರಿ 10:45 ಗಂಟೆಗೆ ನಾನು ಆಸ್ಪತ್ರೆಗೆ ಭೇಟಿ ನೀಡಿದ್ದೇನು. ಅಲ್ಲಿ ವೈದ್ಯರ ಸಮಕ್ಷಮ ಚಾಸಾಃ 24 ರಾಜಕುಮಾರು ಯಳಗೊಂಡ ರವರು ದೂರನ್ನು ಬರೆದು ನನಗೆ ಲಿಖಿತ ದೂರನ್ನು ನೀಡಿದ್ದರು. ನಾನು ಅದನ್ನು ಸ್ವೀಕರಿಸಿಕೊಂಡು ರಾತ್ರಿ 11:00 ಗಂಟೆಗೆ ಠಾಣೆಗೆ ಬಂದು ಅಪರಾಧ ಸಂಖ್ಯೆ 158/2017 ರಂತೆ ದೂರನ್ನು ನೊಂದಣಿ ಮಾಡಿ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಮೂಲ ದೂರು ಹಾಗೂ ಪ್ರಥಮ ವರ್ತಮಾನ ವರದಿಯನ್ನು ಸಿ.ಹೆಚ್.ಸಿ. ನಂಬರ 1536 ಶ್ರೀ.ಲೋಹಾರ ಅವರ ಮುಖಾಂತರ ರಾತ್ರಿ 11:45 ಗಂಟೆಗೆ ರಾಯಬಾಗ ಜೆ.ಎಮ್.ಎಫ್.ಸಿ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿದ್ದೇನೆ. ಮತ್ತು ಅದರ ನಕಲನ್ನು ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿದ್ದೇನೆ. ದೂರನ್ನು ಮತ್ತು ಅದರ ಮೇಲಿನ ಹಿಂಬರಹವನ್ನು ಮತ್ತು ತಮ್ಮ ಸಹಿಯನ್ನು ಗುರುತಿಸಿದ್ದಾರೆ. ದೂರನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಹಿಂಬರಹವನ್ನು ನಿಪಿ-1 [ಬಿ] ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-1 [ಸಿ] ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ-14 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-14 [ಎ] ಎಂದು ಗುರುತಿಸಲಾಯಿತು.

3. ಈ ಪ್ರಕರಣವು ತಮ್ಮ ಠಾಣಾ ಅಪರಾಧ ಸಂಖ್ಯೆ 157/2017 ರ ಕೌಂಟರ ಕೇಸ ಆಗಿದ್ದು, ಅದನ್ನು ಡಿ.ವೈ.ಎಸ್.ಪಿ ಅವರು ತನಿಖೆ ಮಾಡುತ್ತಿದ್ದುದರಿಂದ ಈ ಪ್ರಕರಣದ ತನಿಖೆಯನ್ನು ಡಿ.ವೈ.ಎಸ್.ಪಿ ಅವರಿಗೆ ನೀಡಿದ್ದೇನೆ.

4. ದಿನಾಂಕಃ 27-08-2017 ರಂದು ಡಿ.ವೈ.ಎಸ್.ಪಿ ಅವರ ಆದೇಶದ ಮೇರೆಗೆ 5 ನೇ ಆರೋಪಿ ಶ್ರೀಶೈಲ, 9 ನೇ ಆರೋಪಿ ಚಿದಾನಂದ ಐಹೊಳೆ, 11 ನೇ ಆರೋಪಿ ಮಾರುತಿ, 16 ನೇ ಆರೋಪಿ ರಾಜು ಹಾಗೂ 17 ನೇ ಆರೋಪಿ ಯಮನಪ್ಪ ಇವರುಗಳನ್ನು 4:30 ಗಂಟೆಗೆ ಮುಗಳಖೋಡ ಗ್ರಾಮದ ಜನತಾ ನಿವೇಶನದಲ್ಲಿ ವಶಕ್ಕೆ ಪಡೆದುಕೊಂಡು ಡಿ.ವೈ.ಎಸ್.ಪಿ ಅವರ ಮುಂದೆ ವರದಿಯೊಂದಿಗೆ ಹಾಜರುಮಾಡಿದ್ದೇನೆ. ಮೇಲೆ ಹೇಳಿದ ಆರೋಪಿತರು ಗೈರು ಹಾಜರಾಗಿದ್ದು ಅವರ ಗುರುತಿಸುವಿಕೆಯನ್ನು ಅಲ್ಲಗಳೆಯುವುದಿಲ್ಲ ಎಂದು, ಅವರ ಗೈರು ಹಾಜರಿಯನ್ನು ಮನ್ನಿಸಬೇಕೆಂದು ಆರೋಪಿ ಪರ ವಕೀಲರು ಅರ್ಜಿಯನ್ನು ಸಲ್ಲಿಸಿದ್ದು, ಅರ್ಜಿಯನ್ನು ಮನ್ನಿಸಲಾಗಿದೆ.

**ಪಾಟೀ ಸವಾಲು: 1 ರಿಂದ 4, 8, 9, 13 ಮತ್ತು 17 ನೇ ಆರೋಪಿತರ ಪರ ಶ್ರೀ.ಹೆಚ್.ಸಿ.ಎಸ್ ವಕೀಲರಿಂದ**

ಈ ಪ್ರಕರಣದ 1 ನೇ ಆರೋಪಿ ಬಸಪ್ಪ ಮಾದರ ಅವರು ನೇಮಿನಾಥ ಬಾಬನ್ನವರು ಮತ್ತು ಇತರರು ತಮ್ಮ ಮೇಲೆ ಹಲ್ಲೆ ಮಾಡಿದ್ದಾರೆ ಎಂದು, ಹಲ್ಲೆಗೆ ಒಳಗಾಗಿ ಚಿಕಿತ್ಸೆ ಪಡೆಯುತ್ತಿದ್ದಾಗ ನಾನು ಆಸ್ಪತ್ರೆಗೆ ಭೇಟಿ ನೀಡಿ ಬಸಪ್ಪ ಮಾದರ ಅವರಿಂದ ದೂರನ್ನು ಸ್ವೀಕರಿಸಿಕೊಂಡು ಠಾಣೆಗೆ ಬಂದು ರಾತ್ರಿ 9:00 ಗಂಟೆಗೆ ಠಾಣಾ ಅಪರಾಧ ಸಂಖ್ಯೆ 157/2017 ರಂತೆ ನೊಂದಣಿ ಮಾಡಿದ್ದೇನೆ ಎನ್ನುವುದು ಸರಿ. ಆ ಪ್ರಕರಣದಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ಕಲಂಗಳನ್ನು ಅಳವಡಿಸಿದ್ದರಿಂದ ಅದರ ಮೂಲ ದೂರು ಮತ್ತು ಪ್ರಥಮ ವರ್ತಮಾನ ವರದಿಯನ್ನು ನನ್ನ ಸಿಬ್ಬಂದಿಯವರ ಮುಖಾಂತರ ವಿಶೇಷ ಸತ್ರ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿದ್ದೇನೆ ಎನ್ನುವುದು ಸರಿ. ಆ ಬಗ್ಗೆ ಶೀಘ್ರ ವರದಿಯನ್ನು ಇ-ಮೇಲ್ ಮೂಲಕ ಕಳುಹಿಸಿಕೊಟ್ಟಿದ್ದೇನೆ.

2. ಅಪರಾಧ ಸಂಖ್ಯೆ 157/2017 ದಾಖಲು ಮಾಡಿದ ನಂತರ ರಾತ್ರಿ 10:00 ಗಂಟೆಗೆ ಹಾರೂಗೇರಿ ಆಸ್ಪತ್ರೆಗೆ ಭೇಟಿ ನೀಡಿ ಈ ಪ್ರಕರಣದ ದೂರುದಾರರಿಂದ ದೂರನ್ನು ಸ್ವೀಕರಿಸಿಕೊಂಡು ಠಾಣೆಗೆ ಬಂದು ದೂರನ್ನು ಅಪರಾಧ ಸಂಖ್ಯೆ 158/2017 ರಂತೆ ಪ್ರಕರಣವನ್ನು ನೊಂದಣಿ ಮಾಡಿದ್ದೇನೆ ಎನ್ನುವುದು ಸರಿ. ಬಾಬನ್ನ ಅವರ ಕುಟುಂಬದಲ್ಲಿ

ಉನ್ನತ ಅಧಿಕಾರಿಗಳು ಇರುವುದರಿಂದ ಹಾಗೂ ರಾಜಕೀಯವಾಗಿ ಬಲಷ್ಠರಾಗಿರುವುದರಿಂದ ನಾನು ಒತ್ತಡಕ್ಕೆ ಮಣಿದು ಅಪರಾಧ ಸಂಖ್ಯೆ 158/2017 ರಂತೆ ಪ್ರಕರಣವನ್ನು ನೊಂದಣಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ನಾನು ಮೇಲಾಧಿಕಾರಿಗಳ ಮಾತು ಕೇಳಿ 5 ನೇ ಆರೋಪಿ ಶ್ರೀಶೈಲ, 9 ನೇ ಆರೋಪಿ ಚಿದಾನಂದ ಐಹೊಳೆ, 11 ನೇ ಆರೋಪಿ ಮಾರುತಿ, 16 ನೇ ಆರೋಪಿ ರಾಜು ಹಾಗೂ 17 ನೇ ಆರೋಪಿ ಯಮನಪ್ಪ ಇವರುಗಳನ್ನು ದಸ್ತಗಿರಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: 5 ರಿಂದ 7, 10 ರಿಂದ 12, 14 ರಿಂದ 16 ನೇ ಆರೋಪಿತರ ಪರ ಶ್ರೀ.ಆರ್.ಕೆ.ಬಿ ವಕೀಲರಿಂದ**

1 ರಿಂದ 4, 8, 9, 13 ಮತ್ತು 17 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು 5 ರಿಂದ 7, 10 ರಿಂದ 12, 14 ರಿಂದ 16 ನೇ ಆರೋಪಿತರ ಪರ ವಕೀಲರು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.